ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರದವರು ಕಂದಾಯ ರೆಮಿಷ್ಷ ಕೊಡಬೇಕಾದರೆ ಸ್ವಲ್ಪ ನಿಧಾನವಾಗುತ್ತದೆ. ಇದಕ್ಕೆ ಕಾರಣ ಎಲ್ಲ ಅಂಶಗಳನ್ನೂ ಯೋಚನೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಸರ್ಕಾರದಲ್ಲೇ ಹೀಗೆ. ಅವರು ಕೊಡುವ ವಿಚಾರದಲ್ಲಿ ನಿಧಾನವಾಗುತ್ತದೆ. ಅವರಿಗೆ ಬರುವುದನ್ನು ಬೇಗ ವಸೂಲು ಮಾಡುತ್ತಾರೆ.

Sri K. LAKKAPPA.—In view of the surcharge levy will the Government consider the question of exempting persons who have been granted lands on account of submersion and will the Government consider to bring an amendment to that effect?

Mr. SPEAKER.—How does it arise out of this question?

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ರೆಮಿಷ್ಷ ಮಾಡಲು ಸ್ವಲ್ಪ ತಡವಾಗುತ್ತದೆಂದು ಮಂತ್ರಿಗಳು ಹೇಳಿದರು. ವಸೂಲಾದ ಮೇಲೆ ತೀರ್ಮಾನ ಮಾಡುತ್ತೀರೋ ಅಥವಾ ಮೊದಲೇ ಮಾಡುತ್ತೀರೋ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ದಿನವೆಂದು ನಾನು ಹೇಳಲಿಲ್ಲ. ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ಆದರಿಂದ ನಿಧಾನವಾಗುತ್ತದೆಂದು ಹೇಳಿದೆ. ಒಂದು ವೇಳೆ ಮುಂದಿನ ವರ್ಷದ ಕಂದಾಯ ವಸೂಲಾಗಿದ್ದರೆ, ರೆಮಿಷ್ಷ ಆಗಿರುವುದನ್ನು ಮುಂದೆ ಕಳೆದು ಮಿಕ್ಕುದನ್ನು ತೆಗೆದುಕೊಳ್ಳುತ್ತಾರೆ. ಇದೇ ಪದ್ಧತಿ ಅನುಸರಿಸುತ್ತಾರೆ.

Construction of a Bridge across Naginenadi between Chottanahalli and Bilidevalaya.

*Q.— 127. Sri ANDANAIAH (Kunigal) :—

Will the Government be pleased to state :—

(*a*) whether they have received any representations from the people requesting them to construct a bridge accross Doddakere-Kodihalla (Naginenadi) between Chottanahalli and Bilidevalaya ;

(*b*) if so, whether the Public Works Department has conducted a survey and prepared an estimate; and if so, the estimated amount;

(*c*) when they intend to take up the construction of the bridge?

A.—Sri VEERENDRA PATIL (Minister for Public Works).—

(*a*) Yes.

(*b*) Yes, the estimate is for construction of a high level causeway at a cost of Rs. 30,000.

(*c*) The work will be taken up according to priority and availability of funds.

ಶ್ರೀ ಆಂದಾನಯ್ಯ.— ಆಂದಾಜು ತಯಾರು ಮಾಡಿ ಎಷ್ಟು ವರ್ಷವಾಯಿತು?

ಶ್ರೀ ವೀರೇಂದ್ರ ಪಾಟೀಲ್.—ಯಾವಾಗ ಆಂದಾಜು ತಯಾರಾಗಿದೆಯೆಂಬ ಸಮಾಚಾರ ಈಗ ನನ್ನಲ್ಲಿಲ್ಲ.

ಶ್ರೀ ಆಂದಾನಯ್ಯ.—ನದಿಯ ಎರಡು ಪಕ್ಕಗಳಲ್ಲಿಯೂ ಜಮೀನಿದ್ದು, ಗೊಬ್ಬರ ನಗೈರೆ ಸಾಗಿಸಲು ಹತ್ತಾರು ಮೈಲಿ ಸುತ್ತಿಕೊಂಡು ಹೋಗಬೇಕಾಗಿರುವುದರಿಂದ ರೈತರಿಗೆ ಕಷ್ಟವಾಗುತ್ತಿರುವುದರಿಂದ ಇದನ್ನು ಬೇಗ ಮಾಡಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲೇ ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ಬಜೆಟ್ ಹೆಡ್‌ನಲ್ಲಿ ಹಣ ಕೊಡಲು ಆಂದಾಜು ಮಾಡಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ರೂರಲ್ ಕಮ್ಯೂನಿಕೇಷನ್ಸ್‌ನಲ್ಲಿ above 20 feet water way ಇದ್ದು, ಅಲ್ಲಿ bridges, culverts, ಮುಂತಾದುವನ್ನು ಕಟ್ಟಿಸಬೇಕಾದರೆ, Construction of C. D. works on non-P. W. D. works ಎಂದಿದೆ. ಅದರಲ್ಲಿ ಎಷ್ಟು ಹಣ ಒದಗುತ್ತದೆ ಎಂದು ನೋಡಿಕೊಂಡು ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸೇತುವೆ ಕೆಲಸವನ್ನು ಮಾಡುವಾಗ ಇನ್ನೂ ದೇಶದಲ್ಲಿ ಈ ಸೇತುವೆಗಳನ್ನು ಮಾಡುವ ಬಗ್ಗೆ ಎಷ್ಟು ರೆಪ್ರೆಜೆಂಟೇಷ್ಷ ಬಂದಿವೆ ಎಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ ಅಲ್ಲವೇ? ಗ್ರಾಂಟ್ ಬಂದಾಗ ಎಸ್ಟಿಮೇಟ್ ಮಾಡುವ ಬದಲು ಮೊದಲೇ ಎಸ್ಟಿಮೇಟ್ ರೆಡಿ ಮಾಡಿಕೊಂಡು ಇಟ್ಟುಕೊಂಡಿದ್ದರೆ ಗ್ರಾಂಟ್ ಬಂದ ತಕ್ಷಣ ಅದನ್ನು ಸ್ಯಾಂಕ್ಷ್ ಮಾಡಬಹುದಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಆ ಸೇತುವೆ ನಿರ್ಮಾಣದ ಬಗ್ಗೆ ಎಸ್ಟಿಮೇಟ್ ತಯಾರಾಗಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾವು ಎಸ್ಟಿಮೇಟ್ ತಯಾರಾಗಿದೆ ಎಂದು ಉತ್ತರ ಕೊಟ್ಟಿದ್ದೇವೆ. ಈಗ ಸಾಮಾನ್ಯವಾಗಿ ಯಾವುದಾದರೂ ಒಂದು ಸೇತುವೆ, ರೋಡು, ಮುಂತಾದ ಕೆಲಸಗಳ ಸಂಬಂಧದಲ್ಲಿ ಮಾನ್ಯ ಸದಸ್ಯರುಗಳು ಯಾರಾದರೂ ಪ್ರಶ್ನೆಯನ್ನು ಕೇಳಿದಾಗ, ಅದರ ಅವಶ್ಯಕತೆ ಎಷ್ಟರಮಟ್ಟಿಗೆ ಇದೆ

(ಶ್ರೀ ವೀರೇಂದ್ರ ಪಾಟೀಲ್)

ಎಂಬುದನ್ನು ನೋಡಿಕೊಂಡು ಅವುಗಳ ಎಸ್ಟಿಮೇಟುಗಳನ್ನು ತಯಾರು ಮಾಡಬೇಕಾಗುತ್ತದೆ. ಎಸ್ಟಿಮೇಟ್ ತಯಾರು ಮಾಡಿದಾಕ್ಷಣಕ್ಕೇ ದುಡ್ಡು ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ಯತೆ ಮತ್ತು ಹಣದ ಲಭ್ಯತೆಗಳಿಗೆ ಅನುಸಾರವಾಗಿ ಪ್ರಯಾರಿಟಿ ನೋಡಿ ಆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Priority and availability of funds ಬೇಸಿಸ್ ವೇಲೆ ಕೆಲಸಗಳನ್ನು ತೆಗೆದುಕೊಳ್ಳುತ್ತೀವೆಂದು ಹೇಳಿದ್ದೀರಿ, ಈಗ ತುಮಕೂರು ಜಿಲ್ಲೆಯಲ್ಲಿ ಕೆಲವು ಸೇತುಗಳು ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ಅವುಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ, ಅವು ಎಷ್ಟನೇ ಪ್ರಿಯಾರಿಟಿಯಲ್ಲಿ ಬರುತ್ತವೆ?

ಶ್ರೀ ವೀರೇಂದ್ರಪಾಟೀಲ್.—ಅವುಗಳ ಪ್ರಿಯಾರಿಟಿಯನ್ನು ಇವೊತ್ತು ಫಿಕ್ಸ್ ಮಾಡುವುದಕ್ಕಾಗುವುದಿಲ್ಲ. ಪ್ರತಿ ವರ್ಷ ಎಷ್ಟು ದುಡ್ಡು ಬರುತ್ತದೆ, ಮತ್ತು ಆ ವರ್ಷ ಯಾವ ಪ್ರೋಗ್ರಾಮಿಗೆ ಯಾವ ಪ್ರಿಯಾರಿಟಿ ತೆಗೆದುಕೊಳ್ಳಬೇಕೆಂಬುದನ್ನು ನಿರ್ಧಾರ ಮಾಡುತ್ತೇವೆ. ಈ ವರ್ಷ ಆ ಸೇತುವೆಯ ಕೆಲಸಕ್ಕೆ ಬಜೆಟ್ಟಿನಲ್ಲಿ ಪ್ರಾವಿಜನ್ ಇಲ್ಲ. ಆದ್ದರಿಂದ ಈ ವರ್ಷ ತೆಗೆದುಕೊಳ್ಳುವುದು ಪ್ರಿಯಾರಿಟಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರಿಯಾರಿಟಿ ಮತ್ತು ಅವೈಲಬಿಲಿಟಿ ಆಫ್ ಫಂಡ್ಸ್ ಎನ್ನುತಕ್ಕದ್ದು ಒಂದು ನೆಪ. ಒಂದು ಸಣ್ಣ ಸೇತುವೆಯ ಕೆಲಸದ ಸಂಬಂಧದಲ್ಲಿ ರೀಆರ್ಗನೈಜೇಷನ್ ಆಗುವುದಕ್ಕಿಂತ ಮುಂಚೆಯೇ ಅದರ ಎಸ್ಟಿಮೇಟ್ ಆಗಿ ಆ ಕೆಲಸವನ್ನು ಪ್ರಾರಂಭ ಮಾಡಬೇಕಾಗಿತ್ತು. ಆ ಕೆಲಸ ಇನ್ನೂ ಅದೇ ಸ್ಟೇಜಿನಲ್ಲಿ ನಿಂತು ಹೋಗಿದೆಯಲ್ಲವೇ?

ಶ್ರೀ ವೀರೇಂದ್ರಪಾಟೀಲ್.—ಅದು ರೀ ಆರ್ಗನೈಜೇಷನ್ನಿಗಿಂತ ಮುಂಚೆಯೇ ಅದದ್ದಲ್ಲ. ರೂರಲ್ ಕಮ್ಯುನಿಕೇಷನ್ ರೋಡ್ ಮಾಡಬೇಕಾದ ಕಡೆ, ಸ್ಟೇಟ್ ಹೈವೇ, ಡಿಸ್ಟ್ರಿಕ್ಟ್ ರೋಡ್, ಮೇಜರ್ ಡಿಸ್ಟ್ರಿಕ್ಟ್ ರೋಡು ಇಂಥವುಗಳ ಮೇಲೆ ಅನೇಕ ಸೇತುವೆಗಳ ಕೆಲಸವನ್ನು ಮಾಡಬೇಕಾಗಿದೆ. ದುಡ್ಡು ನೋಡಿಕೊಂಡು ಅವುಗಳ ಕೆಲಸವನ್ನು ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳತಕ್ಕ ಸೇತುವೆಯ ಕೆಲಸ ಬಹಳ ಅವಶ್ಯ. ಅದಕ್ಕೆ 30 ಸಾವಿರ ರೂಪಾಯಿಗಳು ಖರ್ಚಾಗತ್ತದೆ. ಅದನ್ನು ಈಗಲೇ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ —ಪ್ರಿಯಾರಿಟಿಯನ್ನು ಫಿಕ್ಸ್ ಮಾಡುವಾಗ ಡಿಸ್ಟ್ರಿಕ್ಟ್ ವೈಜ್ ಪ್ರಿಯಾರಿಟಿಯನ್ನು ಫಿಕ್ಸ್ ಮಾಡುತ್ತೀರಾ? ಅಥವಾ ಸಬ್ ಡಿವಿಜನ್ ವೈಜ್ ಪ್ರಿಯಾರಿಟಿಯನ್ನು ಫಿಕ್ಸ್ ಮಾಡುತ್ತೀರಾ?

MR. SPEAKER.—It is a hypothetical question. At present he says that there is no priority and that there is no provision in the Budget.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಎಸ್ಟಿಮೇಟ್ ಮಾಡಿಸಿದ ಮೇಲೆ ಮುಂದಿನ ವರ್ಷ ಆದಕ್ಕೆ ದುಡ್ಡು ಒದಗಿಸುವಾಗ ಪ್ರಿಯಾರಿಟಿಯನ್ನು ಫಿಕ್ಸ್ ಮಾಡುತ್ತಾರೆ. ಆ ರೀತಿ ಪ್ರಿಯಾರಿಟಿಯನ್ನು ಫಿಕ್ಸ್ ಮಾಡುವಾಗ ಡಿಸ್ಟ್ರಿಕ್ಟ್ ವೈಜ್ ಪ್ರಿಯಾರಿಟಿಯನ್ನು ಫಿಕ್ಸ್ ಮಾಡಿ ಅವುಗಳಿಗೆ ದುಡ್ಡನ್ನು ಒದಗಿಸುತ್ತೀರಾ ಅಥವಾ P.W.D. ಸಬ್ ಡಿವಿಜನ್ ವೈಜ್ ಪ್ರಿಯಾರಿಟಿಯನ್ನು ಫಿಕ್ಸ್ ಮಾಡಿ ಅವುಗಳಿಗೆ ದುಡ್ಡನ್ನು ಒದಗಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಡಿಸ್ಟ್ರಿಕ್ಟ್ ವೈಜ್ ಮತ್ತು ಸಬ್ ಡಿವಿಜನ್ ವೈಜ್ ಪ್ರಿಯಾರಿಟಿಯನ್ನು ಫಿಕ್ಸ್ ಮಾಡುವ ಹಾಗಿಲ್ಲ. ಈ ತರಹ ಸ್ಕೀಮಿಗೆ ಎಷ್ಟು ದುಡ್ಡು ಬರುತ್ತದೆ ಎಂಬುದನ್ನು ನೋಡಿಕೊಂಡು, ಆತಿ ಮಹತ್ವದ ಪ್ರಾಜೆಕ್ಟುಗಳು, ಹೈಲೆವೆಲ್ ಕಾಸ್‌ವೇಗಳು ಇವುಗಳನ್ನು ತೆಗೆದುಕೊಳ್ಳಲು ಎಷ್ಟರಮಟ್ಟಿಗೆ ದುಡ್ಡು ಇದೆ, ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ನೋಡಿಕೊಂಡು ಮಹತ್ವದ ಮೇಲೆ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

Sri C. J. MUCKANNAPPA.—The Hon'ble Minister denied that it is not before State Reorganisation. May I know when this estimate was prepared for construction of this Bridge?

Sri VEERENDRA PATIL.—I have already stated that this bridge comes under Rural Communication, Rural Communication Programme was started in the year 1950 and the States Reorganisation took place in 1956.

Sri C. J. MUCKANNAPPA.—I want to know when this estimate was prepared.

Sri VEERENDRA PATIL.—I do not know when exactly the estimates were prepared.

MR. SPEAKER.—The Hon'ble Minister may kindly get the information and furnish it to the Hon'ble Member.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಸ್ವಾತಂತ್ರ್ಯವನ್ನು ಗಳಿಸಿದ ನಂತರ ಸೇತುವೆಗಳ ಕೆಲಸವನ್ನು ಮಾಡಬೇಕಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೂ ಗುರುತು ಇದೆ. ಈ ವಿಷಯವನ್ನು ನಾನು ಅನೇಕ ಸಲ ಹೇಳಿದ್ದೇನೆ. ಈ ಕಮ್ಯುನಿಕೇಷನ್ಸ್‌ಗೋಸ್ಕರ 32 ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಹಾಕಿದ್ದಾಗ 3ನೇ ಪಂಚವಾರ್ಷಿಕ ಯೋಜನೆಯಲ್ಲಿ

(ಶ್ರೀ ವೀರೆಂದ್ರ ಪಾಟೀಲ್)

9 ಕೋಟಿ ರೂಪಾಯಿಗಳು ಮಾತ್ರ ಸಿಕ್ಕಿತ್ತು. ಅದನ್ನು ಖರ್ಚು ಮಾಡಿದ್ದೇವೆ. ಈ ವರ್ಷದ ಅಂತ್ಯದಲ್ಲಿ ಇದಕ್ಕೋಸ್ಕರ ಒಂದು ಕೋಟಿ ರೂಪಾಯನ್ನು ಹೆಚ್ಚು ಖರ್ಚು ಮಾಡುವ ಅವಕಾಶ ವಿದೆ. ದುಡ್ಡಿನ ಅಭಾವದಿಂದ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕಾಗುವುದಿಲ್ಲ. ಹೆಚ್ಚು ಮಹತ್ವ ಇರುವ ಕೆಲಸಗಳನ್ನು ಮಾತ್ರ ತೆಗೆದುಕೊಳ್ಳಬೇಕಾಗುತ್ತದೆ. ದುಡ್ಡು ನಮ್ಮ ಹತ್ತಿರ ಎಷ್ಟು ಇದೆ, ಹಣ ಎಷ್ಟು ಸಿಕ್ಕುತ್ತದೆ ಅದರ ಮೇಲೆ ಇದು ನಿಲ್ಲುತ್ತದೆ.

Sri D. PARAMESWARAPPA.—Is the Government aware that many of the estimates though sanctioned have not been given Priority?

Sri VEERENDRA PATIL.—Because we do not have sufficient funds.

Proposals for the Creation of more all India Service on the pattern of I. A. S. and I. P. S.

* Q.—238 SRI SANJEEVANATH IKALA (Surutkal).—

Will the Government be pleased state to:—

(*a*) whether they have received any draft proposals from the Central Government regarding the creation of some more All India Services on the pattern of I. A. S. and I. P. S.;

(*b*) if so, when;

(*c*) whether a reply was sent to this and if so, when;

(*d*) what are the suggesions or comments or the recommendations of the State Government in this regard to the Central Government?

A.—Sri S. NIJALINGAPPA.—(Chief Minister).—

(*a*) Yes.

(*b*) In February, 1962.

(*c*) Yes, recently.

(*d*) It is not possible to disclose the details at present, as the Government of India have treated the correspondence as confidential. Discussions on the subject are likely to take place with the representatives of the Government of India and the question finalised in due course.

Sri SANJEEVANATHA IKALA.—May I know which part of the correspondence is confidential and which is not?

Sri S. NIJALINGAPPA.—All parts of the correspondence is confidential.

Sri SANJEEVANATHA IKALA.—I want to know whether the proposal sent by the Central Government is confidential or the recommendation of the State Government is confidential?

Sri S. NIJALINGAPPA.—I submitted that all portions of the correspondence are confidential.

Sri SANJEEVANATH IKALA.—The Central Government has sent the proposal as early as February 1962 whereas the reply was sent recently, probably a week earlier or after the sending of my question. May I know why 11 months were taken to send a reply to the Government?

Sri S. NIJALINGAPPA—Because these things have to be studied in all its aspects.

Sri SANJEEVANATH IKALA,—May I know whether it referred to Forest, Agriculture aud Judiciary or anything else?

Sri S. NIJALINGAPPA.—According to the resolution passed by the Rajya Subha, the Departments were Engineering, Medical and Forest.

1.30 P. M.

ಶ್ರೀ ಪಿ. ವೆಂಕಟಗಿರಿಯಪ್ಪ.—ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಆದೇಶದಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ನವರಿಗೆ ಈ ಆಲಿಂಡಿಯಾ ಸರ್ವಿಸುಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಕೊಟ್ಟಿಲ್ಲವೆಂತ ಏನಾದರೂ ಇದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ಈ ಪ್ರಶ್ನೆಯಲ್ಲಿ ಬರುವುದಕ್ಕೆ ಸಾಧ್ಯವಿಲ್ಲ.

Sri S. M. KRISHNA.—Is the Mysore Government, in principle, favouring the creation of new All-India Services?